# ಜನಪದ ಕಾವ್ಯ ಮತ್ತು ಧರ್ಮ

ಡಾ. ಪಿ.ಎಸ್. ಗೀತಾ



ಜನಪದರ ಕಾವ್ಯವು ನಿರಾಡಂಬರವಾದುದು: ನವಿರಾದ ಮಾಧುರ್ಯ ಸೌಂದರ್ಯಗಳಿಂದ ಕೂಡಿ ಪರಿಶುದ್ಧ ಭಕ್ತಿಭಾವವನ್ನು ಹೊರಸೂಸುವಂಥದು. ಅದರ ಮನಮೋಹಕತೆಯ ಆಪ್ಯಾಯಮಾನ ಪರಿಚಯ ಮಾಡಿಕೊಟ್ಟಿರುವ ಲೇಖಕಿ ಬೆಂಗಳೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ: ಜಾನಪದ ಸಾಹಿತ್ಯದ ಆಳವಾದ ಅಧ್ಯಯನ ಮಾಡಿದ್ದಾರೆ.

**"ಕು**ರಿತೋದದೆಯುಂ ಕಾವ್ಯಪ್ರಯೋಗ ಪರಿಣಿತಮತಿ" ಗಳಾದ ಸಾಮಾನ್ಯ ಜನ ತಮ್ಮ ಬಾಳಿನ ಹಿಗ್ಗು-ಕುಗ್ಗುಗಳನ್ನು ಸಹಜ ಸ್ಫೂರ್ತಿಯಿಂದ ಹಾಕಿಕೊಂಡಿದ್ದೇ 'ಜನಪದ ಕಾವ್ಯ'. ಈ ಬಗೆಯ ಕಾವ್ಯ ನೇರ, ಸರಳ, ಪ್ರಾಮಾಣಿಕ. ಇಲ್ಲಿ ಜನ ಪದರ ಆಶಯ, ನಂಬಿಕೆ, ದುಮ್ಮಾನ, ವಿಷಾದಗಳು ಯಾವ ಉಪಾಧಿಗಳೂ ಇಲ್ಲದೆ ನೇರವಾಗಿ ಒಂದು ಹೃದಯದಿಂದ ಹುಟ್ಟಿ, ಮತ್ತೊಂದು ಹೃದಯವನ್ನು ಮುಟ್ಟುತ್ತವೆ. ತನ್ನ ಅನುಭವದ ಆಚೆಗಿನದಕ್ಕೆ ಅದು ಕೈಚಾಚುವುದಿಲ್ಲ; ತೋರಿಕೆಗಾಗಿ ಅಭಿವ್ಯಕ್ತಿಯಲ್ಲ. ಬದುಕೇ ಹಾಡಾಗುವ ಪ್ರಕ್ರಿಯೆ ಇಲ್ಲಿಯದು.

ನಮ್ಮ ಗ್ರಾಮೀಣ ಜನಪದರ ಬದುಕಿನಲ್ಲಿ ಜೀವಸ್ಪರ್ಶವಿಲ್ಲದ ಜೀವನಾನುಭವವೇ ಇರಲಿಲ್ಲವೆಂದರೆ ಉತ್ಪ್ರೇಕ್ಷೆಯಲ್ಲ. ಉಳಿದ ದೇವಾನುದೇವತೆಗಳ ಮಾತು ಹಾಗಿರಲಿ, ಅವರಿಗೆ ಬೆಳೆಯುವ ಭೂಮಿ, ನೆರಳು ನೀಡುವ ಮನೆ, ಬೆಟ್ಟದ ಬಿದಿರು, ಬೀಸುವ ಕಲ್ಲು, ಉಳುವ ಎತ್ತು, ಹರಿವ ನದಿ ಎಲ್ಲವೂ ದೈವವೇ. ಜೀವನವನ್ನು ಪೊರೆಯುವ ಸಗುಣಾತ್ಮಕವಾದದ್ದನ್ನೆಲ್ಲ ದೈವವಾಗಿ ಕಂಡು ಮನತುಂಬಿ ಹಾಡಬಲ್ಲವರು ಅವರು. ಧರ್ಮ ಎನ್ನುವುದು, ದೈವ ಎನ್ನುವುದು ಅವರಿಗೆ ದಿನದ ಒಂದು ನಿರ್ದಿಷ್ಟ ಮುಹೂರ್ತದ ಕುಬ್ಜ ಅನುಭವವಲ್ಲ, ಬದಲಿಗೆ ಇಡಿಯ ಬದುಕೇ ದೈವ ನೀಡಿದ ವರ. ಅದನ್ನು ಸರಿಯಾಗಿ ನಡೆಸುವುದು ಪೂಜೆಯೇ ಹೊರತು, ಅದನ್ನು ಬಿಟ್ಟು ಬೇರೆಯದಿಲ್ಲ.

ಹೀಗಾಗಿ ಜನಪದರ ದೈವತದ ಕಲ್ಪನೆಯಲ್ಲಿ ಕೂದಲು ಸೀಳುವ ತರ್ಕವಿಲ್ಲ, ವೇದಾಂತ ಬ್ರಹ್ಮಾಂಡಗಳೆಂಬ ಬೌದ್ಧಿಕ ಪ್ರಖರತೆಯ ಪರಿವೇಷವಿಲ್ಲ, ದ್ವೈತ-ಅದ್ವೈತಗಳೆಂಬ ಬಿರುಕಿಲ್ಲ. ಅದು ತನ್ನ ಬುದ್ಧಿಮೂಲದಿಂದ ಹುಟ್ಟುವುದಿಲ್ಲ, ಭಾವಮೂಲ ದಿಂದ ಹುಟ್ಟುವಂಥದು. ತಾನು ಹೇಗೋ ತನ್ನ ದೈವವೂ ಹಾಗೆಯೇ. ಆ ದೈವವು ತಂದೆ, ತಾಯಿ, ಗುರು, ಸ್ನೇಹಿತ, ಬಂಧು ಎಲ್ಲವೂ ಆಗಬಲ್ಲುದು. **ಬೆಟ್ಟದ ಬಿಳಿಗಿರಿ ರಂಗ, ಮಲೆಯ ಮಾದೇಶ್ವರ, ಹನುಮಂತರಾಯ, ಕಾಳಮ್ಮ, ಬೀರಮ್ಮ ಯಲ್ಲಮ್ಮ, ಅಂತರಗಟ್ಟೆಮ್ಮ, ಮಸಣೀಕಮ್ಮ** ಅಷ್ಟೇಕೆ **ಪಿಳೇಗಮ್ಮನೇ** ಮೊದಲಾದ ನೂರಾರು ದೈವಗಳು ಇವರ ಆಪ್ತರು. ಕಷ್ಟ ಪರಿಹರಿಸಿ, ಇಷ್ಟಪ್ರದರಾಗಬಲ್ಲ ಈ ದೇವತೆಗಳಲ್ಲಿ ಕೆಲವು ಹಣ್ಣುಹೂವುಗಳಿಂದ ತೃಪ್ತವಾಗುವುವಾದರೆ, ಮತ್ತೆ ಕೆಲವು ಕುರಿಕೋಣಗಳನ್ನೇ ಬೇಡುವಂಥವು. ಸಾಧಾರಣವಾಗಿ ಆಯಾ ಪ್ರದೇಶಕ್ಕೆ ಅಲ್ಲಲ್ಲಿಯವೇ ಅಧಿದೈವಗಳು. ಅವುಗಳ ವಾರ, ಹಬ್ಬ, ಪರಿಷೆ ಎಲ್ಲವನ್ನೂ ಎರಡಿಲ್ಲದ ನಂಬಿಕೆಯಿಂದ ಗ್ರಾಮಸ್ಥರು ನಡೆಸಿಕೊಂಡು ಬರುತ್ತಿದ್ದರು.

ಮೂರು ಸಾಲಿನ ವಾಮನಾವತಾರದ ತ್ರಿಪದಿಯಿಂದ ಹಿಡಿದು, ಜಾನಪದ ಮಹಾಕಾವ್ಯಗಳಲ್ಲಿ (ಮಲೆಯ ಮಾದೇಶ್ವರ ಸ್ವಾಮಿ ಕಾವ್ಯ, ಮಂಟೇಸ್ವಾಮಿ ಕಾವ್ಯ ಇತ್ಯಾದಿ) ಆ ಭಕ್ತಹೃದಯದ ನಾನಾ ಭಾವಗಳನ್ನು ಸಹಜವಾಗಿ ಅರಿಯಬಹುದು. ತನ್ನ

ದೈವತವನ್ನು ಸ್ತುತಿಸುವ ಕೆಲವು ತ್ರಿಪದಿಗಳನ್ನಷ್ಟೇ ಇಲ್ಲಿ ನೋಡಲಾಗಿದೆ. ಅವುಗಳ ಶುಭ್ರತೆ, ಸರಳತೆ, ಸೌಂದರ್ಯಗಳು ವಿಸ್ಮಯಕಾರಿಯಾಗಿ ತೋರುತ್ತವೆ.

ಕೃಷಿಕರಿಗೆ ಬೆಳೆವ ಭೂಮಿಗಿಂತ ಹೆಚ್ಚಿನ ದೇವರಿಲ್ಲ. ತಾನು ಹೇಳಿದ್ದನ್ನೆಲ್ಲ ನೀಡುವ ಅವಳ ಸ್ಮರಣೆಯೊಂದಿಗೆ ಪ್ರತಿನಿತ್ಯದ ಬೆಳಕು ಮೂಡಬೇಕು, ಅವರಿಗೆ.

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ – ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನ

ಹೀಗೆ ಎದ್ದಕೂಡಲೇ ದಿನದ ಕೆಲಸದ ಆರಂಭ – ಮೊದಲಿಗೆ ಧಾನ್ಯ ಬೀಸಬೇಕು. ಬೀಸುವ ಕಲ್ಲು ಅವರಿಗೆ ಬರಿ ಕಲ್ಲಲ್ಲ.

ಕಲ್ಲವ್ವ ಮಾತಾಯಿ ಮೆಲ್ಲವ್ವ ರಾಗೀಯ
ಜಲ್ಲಜಲ್ಲನೆ ಉದುರವ್ವ – ನಾ ನಿನಗೆ
ಬೆಲ್ಲದಾರತಿಯ ಬೆಳಗೇನು

ಕೃಷಿಯನ್ನು ನಂಬಿ ಬದುಕುವ ಇವರಿಗೆ ದನಕರುಗಳೇ ಆಧಾರ. "ಎತ್ತ ಎನ್ನಲಿಬಹುದೆ ಎಡಚೋರಿ ಬಸವನ" ಎಂಬುದು ಅವರ ಉದ್ಗಾರ. ಆದ್ದರಿಂದಲೇ ಆ ಬಸವನ

ಕಸವ ಹೊಡೆದ ಕೈ ಕಸ್ತೂರಿ ನಾತವ
ಬಸವಣ್ಣಾ ನಿನ್ನ ಸಗಣೀಯ – ಬಳಿದ ಕೈ
ಎಸಳ ಯಾಲಕ್ಕಿ ಗೊನಿ ನಾತ

ಹೀಗೆ ಸಗಣಿ ಬಾಚುವ ಕೆಲಸದಲ್ಲೂ ಸಂತೋಷ ಕಾಣಬಲ್ಲ ಆ ಕಣ್ಣುಗಳಿಗೆ ದೇವರು ಎಲ್ಲೆಲ್ಲೂ ಕಾಣಬಲ್ಲ.

ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
ಮೊಗ್ಗಾಗ ಕಣ್ಣು ತೆರದಾನ – ಲಿಂಗಯ್ಯನ
ನೋಡಟುಗಿ ನಿದ್ದಿ ಬಯಲಾದೋ

ಇಂಥ ದೈವದ ರಾಜ್ಯಭಾರಕ್ಕೆ "ಹಾಲಲ್ಲದ್ದು–ನೀರಲ್ಲದ್ದು" ಎಂದು ಸಮಗ್ರವಾಗಿ ಒಪ್ಪಿಸಿಕೊಂಡು ಬಾಳುವ ಮನಃಸ್ಥಿತಿ ಇಲ್ಲಿದೆ.

ಮಾದೇವ ನಿನ ಹೊರತು ನಾನ್ಯಾರ ನಂಬಿಲ್ಲ
ನಾ ಮಾಡೆನೆಂಬ ಅಳವಿಲ್ಲ – ಮಾದೇವ
ನೀ ನಡೆಸು ನನ್ನ ಸರುವೆಲ್ಲ

ಈ ನಂಬಿಕೆಯ ಬಲವೇ ಬದುಕಿನ ಕಷ್ಟಗಳನ್ನು ಕಡೆಗಣಿಸುವ ನೈತಿಕ ಬಲವನ್ನು ಅವರಿಗೆ ನೀಡುತ್ತದೆ. ಪಾಲಿಗೆ ಬಂದಿದ್ದನ್ನು ಪಂಚಾಮೃತವನ್ನಾಗಿ ಮಾಡಿಕೊಳ್ಳುವ ವಿಧಾನವಿದು.

ಶಿವಶಿವ ಎಂದರೆ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ – ಎಲೆ ಮನವೆ
ಶಿವನೆಂಬ ಶಬುದ ಬಿಡಬ್ಯಾಡ

ಹೀಗೆ ಭಯದೂರನಾದ ಶಿವನಿಗೇ ಭಯವಾಗುವುದನ್ನು ಕಲ್ಪಿಸಿಕೊಳ್ಳುವ ಮುಗ್ಧಭಕ್ತಿ ಹೀಗಿದೆ:

ಗುಡ್ಡದ ದಾರ್‍ಯಾಗ ಗುಲಗಂಜಿ ಬನದಾಗ
ಒಬ್ಬಾನೆ ಹೆಂಗಿದ್ದಿ ದರಿದೊಳ – ನಿನಮುಂದೆ
ಅಬ್ಬರಿಸಿ ಗಂಗೆ ಹರಿದಾಳು

ದೇವಿಯ ಚೆಲುವು, ಕರುಣೆಯನ್ನಂತೂ ಜಾನಪದ ಕಾವ್ಯ ಎದೆತುಂಬಿ ಹಾಡುತ್ತದೆ. ಈ ಮುಂದಿನ ಸಾಲುಗಳಲ್ಲಿರುವ ಚಿತ್ರವು ಅವಳ ಸೌಂದರ್ಯವನ್ನು ತಂದು ಕಣ್ಣಮುಂದೆ ನಿಲ್ಲಿಸುವಂತಿದೆ.

ಮೂಗಿನಾಗೆ ಮೂಗುತಿ ನಕ್ಕರೆ ಕರಿಹಲ್ಲು
ಅಕ್ಕ ನೀ ಯಾರ ಮಗಳವ್ವೆ ಹಲಸಂಗಿ
ಗಚ್ಚಿನ ಗುಡಿಯ ಲಕ್ಕವ್ವ

ಕಾಚು ತಿಂದು ಹಲ್ಲು ಕಪ್ಪು ಹಿಡಿಸಿಕೊಳ್ಳುವುದು ಒಂದು ಕಾಲದಲ್ಲಿ ಸೌಂದರ್ಯದ ಲಕ್ಷಣವಾಗಿತ್ತು. ಹಾಗಾಗಿ ಹಲಸಂಗಿಯ ಗಾಸೆ–ಗಚ್ಚುಗಳ ವೈಭವದ ಗುಡಿಯಲ್ಲಿರುವ ದೇವಿ ಲಕ್ಕವ್ವನ ಹಲ್ಲುಗಳು ಕಪ್ಪಗೆ ಹೊಳೆಯುತ್ತಿವೆ!

ಬಿಳಿಗಿರಿ ರಂಗ ಬಹಳ ವೈಭವದ ದೈವ; ಶೃಂಗಾರಪುರುಷ. ಅವನು ಬೇಟೆಗೆ ಹೊರಟಿದ್ದು ಹೀಗೆ:

ಬಿಳಿಗಿರಿ ರಂಗಯ್ಯ ಬಿಳಿಯ ತೇಜಿಯನೇರಿ
ಬೆಳಗಾದ ಬೇಟೆ ಹೊರಟಾರೊ – ಕತ್ತೀಯ
ಹೊಳಪಲ್ಲಿ ಮುಖವ ತೊಳೆ ಬಾರೋ

ಯಾವ ಭೋಗ–ಭಾಗ್ಯವಾಗಲಿ, ಸಂತಾನ–ಸನ್ಮಾನವಾಗಲಿ ಶಿವ ಕೊಟ್ಟರೆ ಉಂಟು. ಬೇರೆಯವರು ಏನು ಕೊಟ್ಟಾರು? ಹಾಗೆ ಕೊಟ್ಟದ್ದು ಎಷ್ಟು ಜನಕ್ಕೆ ಬಂದೀತು?

ಆದ್ದರಿಂದಲೇ ಬದುಕಿನ ಎಲ್ಲ ಆಗುಹೋಗುಗಳನ್ನು ಅವನಿಗೊಪ್ಪಿಸಿ, ತನ್ನ ಪಾಲಿಗೆ ಬಂದ ಪ್ರಪಂಚವನ್ನು ಹಳಿಯದೆ, ದೋಷದೂರವಾದ ಸಾತ್ವಿಕಭಾವದಲ್ಲಿ ಬದುಕುವುದೇ ಜನಪದರ ಧರ್ಮವಾಗಿ ತೋರುತ್ತದೆ. ಕಷ್ಟವೋ–ಸುಖವೋ, ಸಿರಿತನವೋ–ಬಡತನವೋ, ಇದ್ದುದರಲ್ಲಿ 'ಸರಿಯಾಗಿ' ಬದುಕುವ ಕ್ರಿಯಾಶೀಲ ಮಾರ್ಗ ಇಲ್ಲಿಯದು. ಪಲಾಯನವಾದಕ್ಕೆ ಇಲ್ಲಿ ಎಡೆಯೇ ಇಲ್ಲ. 'ಪುಣ್ಯವಂತರಿಗೆ ನೆರಳಾಗಿ' ಬದುಕುವ ಮರ, ಇಲ್ಲಿಯ ಬದುಕಿನ ಆದರ್ಶ. ಹಾಗಾಗಿ ಸಾರ್ಥಕವಾಗಿ ಬದುಕುವುದು ಹಳಹಳಿಕೆಯಿಲ್ಲದೆ ಕೊನೆಯುಸಿರೆಳೆಯುವುದು ಜನಪದರ ಅಪೇಕ್ಷೆ. ಇದು ಕೈಗೂಡಲು ಆ ಭಗವಂತನ ಕೃಪೆ ಬೇಕಷ್ಟೆ!

ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೊ
ಕರುಣೆ ಕಲ್ಯಾಣ ಬಸವಣ್ಣ – ಕಾಶಿಲಿಂಗ
ಕಡಿತನಕ ಕಾಯೋ ಅಭಿಮಾನ